ರಿಲೇಟೆಡ್ ಅವ. ಯೂರೋಪಿನಲ್ಲಿ ಇದು ಬಹಳ ಅದ. ನಮಗೇನಾಯ್ತು ಅಂತಂದರ, ನಮ್ಮ ಶಿಕ್ಷಣ ಸಿಸ್ಟಮೇ ಪ್ರಾಬ್ಲಮ್ ಅದ. ಈವತ್ತಿಗಾದರೂ ನಮ್ಮ ಶಿಕ್ಷಣದೊಳಗ ಆರ್ಟ್‌ಗೆ ಮಹತ್ವಾನೇ ಇಲ್ಲ. ಸಂವೇದನೆ ಜಾಗ್ರತ ಆಗಬೇಕಾಗಿತ್ತು ಅಂದರ, ಅದಕ್ಕೆ ಪ್ರೇರಣೆ ಕೊಡಬೇಕಾದಂತಹ ಸೆಂಟರ್ ಬೇಕು. ಆ ಸೆಂಟರೇ ಕಲೆ. ಅದೇ ನಮ್ಮ ಶಿಕ್ಷಣದಲ್ಲಿಲ್ಲ. ಅದಕ್ಕಾಗಿ ಸಂವೇದನಶೀಲ ಜೀವನಪ್ರವೃತ್ತಿ ಏನದ, ಅದು ನಮ್ಮಲ್ಲಿ ಇಲ್ಲವೇ ಇಲ್ಲ. ಏಸ್ತೆಟಿಕ್ ರಿಯಾಲಿಟಿ ಮತ್ತು ರಿಯಾಲಿಟಿ, ಸತ್ಯ ಮತ್ತು ಸೌಂದರ್ಯಸತ್ಯ ಇವುಗಳ ನಡುವ ಯಾವ ರೀತಿ ಸಂಬಂಧ ಅದ, ಅದನ್ನ ತಿಳಿಸಿಕೊಡೊ ವ್ಯವಸ್ಥೆ ಇಲ್ಲ. ಅದಕಾಗಿ ನಮ್ಮ ಲೈಫ್ ಬಹಳ ಬರಡಾಗಿಬಿಟ್ಟದ.

◆ **ನೀವು ಗುಲ್ಬರ್ಗ, ರಾಯಚೂರು, ಬೆಳಗಾವಿ ಶಹರಗಳಲ್ಲಿ ಜೀವನ ಕಳೆದಿರಿ. ಅಲ್ಲಿನ ಪ್ರಾದೇಶಿಕ ಭಾಷಾರೂಪಗಳನ್ನು ಲೇಖಕರಾಗಿ ಹೇಗೆ ಅನುಸಂಧಾನ ಮಾಡಿದಿರಿ?**

ಬೆಳಗಾವಿ ಭಾಷೆ ಕಾಸ್ಟ್ಯೂಮ್ ಡಿಸೈನರ್ಸ್ ಲಾಂಗ್‌ವೇಜ್ ಇದ್ದಂಗರೀ. ಕಾಸ್ಟ್ಯೂಮ್ ಡಿಸೈನರ್ಸ್ ಏನು ಮಾಡತಾರ? ಚಂದನೆಯ ಹೆಂಗಸಿಗೆ ಸ್ಮಾರ್ಟ್ ಕಾಣಸಂಗ ಮಾಡತಾರ. ಇವತ್ತು ನನಗ ಬೇಕಾತು ಅಂತಂದರ ಈ ಶಬ್ದ ಮರಾಠಿಗೆ ತರ್ತೀನಿ. ಹಿಂದೀಗೆ ತರ್ತೀನಿ. ಕನ್ನಡದ್ದು ಹಾಕ್ತೀನಿ. ಇಷ್ಟು ಹೊತ್ತು ನಿಮ್ಮ ಜೊತೆಗೆ ಕನ್ನಡದಲ್ಲಿ ಮಾತಾಡಿದೆನಲ್ಲ, ಮಾರ್ಕೆಟಿಗೆ ಹೋದರ, ಒಂದು ಮೂಲಂಗಿ ತಗೋಬೇಕಾಗಿತ್ತು ಅಂತಂದರ, ಮರಾಠಿ ಶಬ್ದ ಮಿಕ್ಸ್ ಮಾಡಿ ಮಾತಾಡತೀನಿ. ಒಂದು ವಾಕ್ಯ ಕನ್ನಡ, ಒಂದು ವಾಕ್ಯ ಮರಾಠಿ. ಅದೂ ತಿಳೀಲಿಲ್ಲ ಅಂತಂದರ ಒಂದು ಸೆಂಟೆನ್ಸ್ ಉರ್ದು ಅಥವಾ ಹಿಂದಿ. ಈ ನಾಲ್ಕು ಕೂಡಿ ನಂದೊಂದು ಭಾಷೆ ಆಗಿರತದ. ಅದಕ್ಕಾ 'ನಿನ್ನ ಲಾಂಗವೇಜ್ ಯಾವದಪಾ, ಮರಾಠಿನೋ ಕನ್ನಡಾನೋ ಹಿಂದಿನೋ ಉರ್ದುನೋ?' ಅಂತ ಕೇಳಿದರ, 'ನಂದು ಬೆಳಗಾವಿದು ಕಾಸ್ಟ್ಯೂಮ್ ಡಿಸೈನರ್ಸ್ ಲಾಂಗವೇಜಪಾ' ಅಂತೀನಿ.

◆ **ಗುಲ್ಬರ್ಗದಲ್ಲಿದ್ದಾಗ?**

ಗುಲ್ಬರ್ಗ ಈಜ್ ಎಗ್ಸಾಕ್ಟಲೀ ದಿ ಸೇಮ್. ಇಲ್ಲಿ ಮರಾಠಿ ಡಾಮಿನೇಟ್ ಮಾಡಿದರ, ಅಲ್ಲಿ ಉರ್ದು ಡಾಮಿನೇಟ್ ಮಾಡ್ತಿತ್ತು. ಇಲ್ಲಿ ಆದಿಲಶಾಹಿಯವರು ರಾಜ್ಯ ಆಳಿದರ ಅಲ್ಲಿ ಬಹಮನಿಯವರು. ಹಿಂಗಾಗಿ ಕಾಮನ್ ಉರ್ದು ಶಬ್ದಗಳೇನು ಬರ್ತಾವ ಮರಾಠಿದೊಳಗ, ಅಷ್ಟು ಕನ್ನಡದೊಳಗ ಬರಂಗಿಲ್ಲ. ಶಿವಾಜಿಯ ಫರ್ಮಾನುಗಳನ್ನ ಓದಿದರ ಉರ್ದು ಓದಿದಂಗ ಅನಿಸ್ತದ. ನೂರಕ್ಕೆ ತೊಂಬತ್ತು ಉರ್ದು ಅದ. ಅವನ ಬಿರುದುಗಳು ಸಹಿತ ಉರ್ದು ಇದ್ದಂಗ ಅವ. ನಮ್ಮ ಕನ್ನಡ ಮತ್ತು ಮರಾಠಿಯೊಳಗ ಇಂಗ್ಲಿಷ್ ಹೆಂಗ ಬರತದೆಯಲ್ಲ, ಆ ರೀತಿಯಾಗಿ ಉರ್ದು ಸಹಜವಾಗಿ ಅಲ್ಲಿ ಬರತದ. ಬಂದ ಕೂಡಲೇ ಅದರ ಲಯ ಮತ್ತು ಛಂದಸ್ಸು ಬದಲಾಗತದ. ಭಾಷಿಕ ನರ್ತಕಿಗೆ ಗೆಜ್ಜೆ ಸಪ್ಪಳ ಏನು ಇರ್ತದಲಾ ಹಂಗ, ಒಂದು ಉರ್ದು ಶಬ್ದ ಸಲೀಸಾಗಿ ಬಂದು ಬಿಡತದ. ನಾನು ಉರ್ದು ಶಬ್ದಗಳನ್ನ ಬಳಸೊ ಉದ್ದೇಶ ಏನಂದರ, ಇವಕ್ಕ ನೀವು ಅಕ್ಸೆಪ್ಟ್ ಮಾಡ್ರೀ ಅಂತ. ಎಂತಹ ಬ್ಯೂಟಿಫುಲ್ ಶಬ್ದಗಳು ಅವರೀ! ಪ್ರಾದೇಶಿಕತೆಯ ಸಂವೇದನೆಯೇ ನೆಲದಲ್ಲಿ ಉಪಯೋಗವಾಗುವಂಥ ಭಾಷೆ. ಅದನ್ನ ಎತ್ತಿಕೊಳ್ರಿ. ಉಪಯೋಗ ಮಾಡ್ರಿ. ನಮ್ಮ ಭಾಷೇನ ರಿಚ್ ಮಾಡೋದು ಇದು. ಶಿವಮೊಗ್ಗ ಭಾಷೆ ಮಾತಾಡ್ರೀ, ಬೆಂಗಳೂರು ಭಾಷೆ ಮಾತಾಡ್ರೀ, ಅಂತಂದರ ಹುಚ್ಚ ಅಂತಾರ. ಕಥೆ ಕಾದಂಬರಿಯೊಳಗ ಬರೆಯೊ ಕಾಲಕ್ಕ ನಿಮ್ಮ ಲಾಂಗವೇಜ್‌ಕ ನೀವು ಬದ್ಧರಾಗಿರಬೇಕು. ಯಾವುದಾದರೂ ಒಂದು ಶಾಸ್ತ್ರಗ್ರಂಥ ಬರೀಲಿಕ್ಕೆ ಹತ್ತೀರಿ ಅಂತಂದರ ಇವೆಲ್ಲಾ ಬೇಕಾಗಿಲ್ಲ.